ತಂಗಿ ಇನ್ನೂ ಹುಟ್ಟಿರಲಿಲ್ಲ. ಅಲ್ಲಿ ಜೊತೆಯಾದವನು ನನಗಿಂತ ಒಂದೆರಡು ವರ್ಷ ದೊಡ್ಡದಿದ್ದ ಸೂರಪ್ಪ. ಅವನು ಎಲ್ಲದಕ್ಕೂ ಸಲ್ಲುತ್ತಿದ್ದ ಗೆಳೆಯ. ನಮ್ಮ ಸಣ್ಣ ಗುಡಿಸಲಿನ ಮುಂದಕ್ಕೆ ಹತ್ತಿರದಲ್ಲಿಯೇ ಏನೇಕಲ್ಲು ಹೊಳೆ ಹರಿಯುತ್ತಿತ್ತು. ಬೇಸಗೆಯಲ್ಲಿ ಸೂರಪ್ಪ ಅಲ್ಲಿ ಈಜು ಕಲಿಸಿದ್ದ. ವಿಸ್ತಾರವಾಗಿ ಹರಿಯುತ್ತಿದ್ದ ಹೊಳೆಯ ಈಚೆ ದಡದಿಂದ ಈಜುತ್ತಾ ಹೋಗಿ, ಆಚೆ ದಡ ಮುಟ್ಟಿ, ಹಿಂದಿರುಗಿ ಬಂದರೆ ಇನ್ನಿಲ್ಲದ ಸಂಭ್ರಮ ನಮಗಿಬ್ಬರಿಗೂ. ಆದರೆ ಮಳೆಗಾಲದಲ್ಲಿ ಆ ಹೊಳೆಯ ಹತ್ತಿರವೂ ಸುಳಿಯಲಾಗದಷ್ಟು ಭಯ. ಕಳ್ಮಕಾರಿನ ಹತ್ತಿರದ ಕೊಡಗಿನ ಗಡಿ ಭಾಗದಲ್ಲಿ ಹುಟ್ಟುವ ಈ ನದಿ ಯಾವ್ಯಾವುದೋ ಊರುಗಳನ್ನು ಸುತ್ತಿಕೊಂಡು ಏನೇಕಲ್ಲು ತಲುಪುವಾಗ ಎಲ್ಲಿಂದ ಏನೇನನ್ನು ಹೊತ್ತುಕೊಂಡು ಬರ್ತಿತ್ತೋ ಹೇಳಲಾರೆ. ಮರದ ದಿಮ್ಮಿಗಳು, ಪೊದರುಗಳು, ಬಿದಿರಿನ ಹಿಂಡಿಲುಗಳು, ತೆಂಗಿನ ಕಾಯಿಗಳು, ಕಂಗಿನ ಸೋಗೆ, ತೆಂಗಿನ ಮಡಲು, ಬುಡಕಿತ್ತ ಬಾಳೆಗಿಡಗಳು, ಕಸ ಕಡ್ಡಿಗಳು, ಹರಿದ ಅಂಗಿಗಳು - ಯಾರು ಪಟ್ಟಿ ಮಾಡಿದ್ದಾರೆ? ಅವೆಲ್ಲವೂ ಮೈದುಂಬಿ ಹರಿಯುವ ಹೊಳೆಯಲ್ಲಿ ತೇಲಿಕೊಂಡು ಹೋಗುವ ರೀತಿಯೂ ರಮ್ಯಾದ್ಭುತ, ಅಜ್ಜಿ ಕಥೆಗಳಲ್ಲಿ ಕುಂಟನೊಬ್ಬ ಸಾಯಂಕಾಲದ ಕೆಂಪು ಮೋಡದ ಬೆನ್ನೇರಿ ಸಾಗುವಂತೆ! ಕಾಣುವ ಮತ್ತು ಕಾಣದಿರುವುದರ ನಡುವೆ ರೋಷದಿಂದ ಮೈ ಹೊರಳಿಸಿಕೊಂಡು ಮುನ್ನುಗ್ಗುವ ಕೆಂಪು ನೀರಿನ ರಭಸವು ನಮ್ಮಲ್ಲಿ ಹುಟ್ಟಿಸುವ ರಸ ಯಾವುದು? ರೌದ್ರ? ವೀರ? ಭಯ? ವಿಸ್ಮಯ? ಭರತನೋ, ಆನಂದವರ್ಧನನೋ ನಮ್ಮೂರಿನ ಮಳೆಗಾಲದ ಹೊಳೆನೋಡಲೊಮ್ಮೆ ಬಂದಿದ್ದರೆ ಚೆನ್ನಾಗಿತ್ತು.

ಬೇಸಗೆಯಲ್ಲಿ ಅದೇ ಹೊಳೆಯಲ್ಲಿ ಅಲ್ಲಲ್ಲೋ ಇರುವ ಬಂಡೆಯ ಮೇಲೆ ಒಬ್ಬನೇ ಕುಳಿತಿರುತಿದ್ದೆ. ನೀರಿನೊಳಕ್ಕೆ ಮೆಲ್ಲನೆ ಕಾಲಿಳಿಸಿದಾಗ ಪುಟ್ಟ ಪುಟ್ಟ ಮೀನುಗಳು ಕಾಲಿನ ಸುತ್ತೆಲ್ಲ ಸೇರಿ ಕಚಗುಳಿಯಿಡುತ್ತಿದ್ದವು. ಆದರೆ, ಈಗ ಆ ಬಂಡೆಯ ಸುತ್ತೆಲ್ಲ 'ಇದು ಪಾತಾಳ ಬಿಲಕ್ಕೆ ಬಾಗಿಲಿದು, ದಲ್ ಘೋರಾಂಧಕಾರಕ್ಕೆ ಮಾಡಿದ ಕೂಪಂ' ಎಂಬ ಸಾಲುಗಳನ್ನು ನೆನಪಿಸುವ ಭಯಾನಕ ಸುಳಿಗಳು. ಸುಳಿಯೊಳಕ್ಕೇನಾದರೂ ಸೇರಿಕೊಂಡರೆ ನೇರವಾಗಿ ಪಾತಾಳಕ್ಕೇ ಪಯಣ. ಹೀಗೆ ಅದೊಂದು ಕೊನೆಯಿಲ್ಲದ ರಮ್ಯಾದ್ಭುತ ಲೋಕ. ಅಂಥ ಭಯಾನಕ ಪ್ರವಾಹದಲ್ಲಿ ಎಲ್ಲಿಂದಲೋ ತೇಲಿ ಬರುತ್ತಿದ್ದ ಕೆಲವು ತೆಂಗಿನ ಕಾಯಿಗಳನ್ನು ನಾನು ಮತ್ತು ಸೂರಪ್ಪ ಕಷ್ಟಪಟ್ಟು ಹಿಡಿದದ್ದುಂಟು. ಆದರೆ ಅಂಥ ಕೆಲಸಗಳ ಅಪಾಯದ ಅರಿವಿದ್ದ ಅಮ್ಮನಿಂದ ಸರಿಯಾಗಿ ಬೈಸಿಕೊಂಡದ್ದರಿಂದ ಆ ಸಾಹಸ ಮುಂದುವರೆಯಲಿಲ್ಲ. ಮಳೆಬರುವಾಗ ಗಾಳ ಹಾಕಲು ಸೂರಪ್ಪ ಹೇಳಿಕೊಟ್ಟದ್ದ. ಅದಕ್ಕೆ ಅಮ್ಮನಿಂದಲೂ ಆಕ್ಷೇಪ ಇರಲಿಲ್ಲ. ಒಂದೆರಡು ಸಲ ದೊಡ್ಡ ಮೀನು ಹಿಡಿದದ್ದೂ ಉಂಟು. ಆದರೆ ಗಾಳಕ್ಕೆ ಸಿಕ್ಕ ಮೀನು ಒದ್ದಾಡುತ್ತಾ ಸಾಯುವುದನ್ನು ನೋಡಲಾಗುತ್ತಿರಲಿಲ್ಲ. ಹೀಗಾಗಿ ಗಾಳ ತೆಗೆದುಕೊಂಡು ಹೊಳೆಬದಿಗೆ ಹೋದರೂ ಮೀನು ಹಿಡಿಯುತ್ತಿರಲಿಲ್ಲ. 'ಇವ ಪ್ರಯೋಜನ ಇಲ್ಲ' ಅಂತ ಅಮ್ಮನೂ ಸುಮ್ಮನಾಗುತ್ತಿದ್ದರು. ಆದರೆ ಏನೇಕಲ್ಲಿನಲ್ಲಿ ಇದ್ದಷ್ಟೂ ಕಾಲ, ಗೊರಬೆ ತಲೆಗೇರಿಸಿಯೂ ಮೈತುಂಬಾ ಒದ್ದೆಯಾಗಿ, ನದಿಯ ಭೋರಿಡುವ ಆರ್ಭಟಕ್ಕೆ ಬೆದರುತ್ತಾ ನಿಲ್ಲುವ ಕ್ರಮವನ್ನು ಮಾತ್ರ ಬಿಟ್ಟುಕೊಡಲಿಲ್ಲ. ಮಳೆ ಹೊಳೆಯಾಗಿ, ಹೊಳೆ ಪ್ರವಾಹವಾಗುವ ಪ್ರಕ್ರಿಯೆಯನ್ನು ಅನುಭವಿಸಿಯೇ ತಿಳಿಯಬೇಕು.

ಮಳೆ ಎಂದರೆ ಬರಿಯ ನೀರಲ್ಲ. ಕಾಡು ಕೂಡಾ ಹೌದು. ಅದರ ಅನುಭವ ಆಗಬೇಕಾದರೆ ಯಾರಾದರೂ ಪಂಜದ ಹತ್ತಿರದ ವಾಟೆಕಜೆಗೆ ಹೋಗಬೇಕು. ಅಲ್ಲಿರುವ ಕರಿಮಲೆಯೊಳಕ್ಕೆ ನಡೆಯಬೇಕು. ನಾನು ವಾಟೆಕಜೆ ಸೇರಿದಾಗ ಜೊತೆಗೆ ಸೂರಪ್ಪನಿರಲಿಲ್ಲ. ಹಾಗಾಗಿ ಬಹುಮಟ್ಟಿಗೆ ಏಕಾಂಗಿಯಾಗಿದ್ದೆ. ಈ ವಾಟೆಕಜೆ ಇದೆಯಲ್ಲಾ? ಅದು ಬಂಟಮಲೆ ಕಾಡಿಗೆ ಸೇರಿದಂತಿರುವ ಕರಿಮಲೆಯ ಒಂದು ಸಣ್ಣ ಪ್ರದೇಶ. ಅದರ ಸುತ್ತಲೂ ದಟ್ಟವಾದ ಕಾಡು. ಅಕ್ಕಪಕ್ಕದಲ್ಲಿ ಯಾವುದೇ ಮನೆಗಳಿರಲಿಲ್ಲ. ಇಡೀ ದಿನ ಯಾವ್ಯಾವುದೋ ಪ್ರಾಣಿಗಳ ಕೂಗು ಕೇಳುತ್ತಿತ್ತು. ಜೀರುಂಡೆಗಳ ಕರ್ಕಶ ಸದ್ದು ಕಡಿಮೆಯಾದದ್ದೇ ಇಲ್ಲ. ಮುಸುವಗಳ ಮತ್ತು ಪೊಟ್ಟ ಹಕ್ಕಿಯ ಕೂಗು ಪ್ರತಿಧ್ವನಿಸುತ್ತಾ ಬಹಳ ದೂರ ಸಾಗುತ್ತಿದ್ದುವು. ಅಲ್ಲಿದ್ದ ಒಂದು ಪುಟ್ಟ ಗುಡಿಸಲಲ್ಲಿ ನಮ್ಮ ವಾಸ. ರಾತ್ರಿಯಾಗುತ್ತಲೇ ವಾಟೆಕಜೆ ಇನ್ನೂ ಭಯಾನಕವಾಗುತ್ತಿತ್ತು. ಆಳುಪಕ್ಕಿ ಎಂಬ ಹೆಸರಿನ ಹಕ್ಕಿ ಕೂಗಿದರೆ, ಇದ್ದಕ್ಕಿದ್ದಂತೆ ಕಾಡು ಇನ್ನಷ್ಟು